KARNATAKA

# Kabya Kalanidhi Series,

No. 1.

# PAMPA SATAKAM,

BY

HARI HARA DEVA.

ಮ ಹಾ ಕ ವಿ

ಹರಿಹರದೇವ ವಿರಚಿತಂ

# ಪಂಪಾ ಶತಕಂ.

EDITED & PUBLISHED

BY

**S. G. Narasimhachar**

Librarian, Government Oriental Library, Mysore;

AND

**M. A. Ramanuja Iyengar**

Asst. Master, Wesleyan High School Mysore.

MYSORE:

PRINTED AT THE STAR PRESS.

1899.

UNIVERSAL
LIBRARY
OU_200708
UNIVERSAL
LIBRARY

# ಕವಿಚರಿತೆ.

——:o:——

"ಈ ಗ್ರಂಥಕರ್ತನಿಗೆ ಹರಿಹರದೇವ ಅಥವಾ ಹರೀಶ್ವರದೇವನೆಂದು ಹೆಸರು. ಈತನು ಸುಮಾರು ಶಕ 1165 ರಲ್ಲಿ- ಎಂದರೆ ಕ್ರಿಸ್ತಶಕ. 1283 ರಲ್ಲಿ- ಇದ್ದಂತೆ ತಿಳಿಯುತ್ತದೆ.

"ಈತನು ಗಿರಿಜಾಕಲ್ಯಾಣ, ಶಿವಗಣದರಗಳೆಗಳು, ಪಂಪಾಶತಕ, ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ರಕ್ಷಾಶತಕ, ಶಿವಾಷ್ಟಮಾಲೆ, ಮುಡಿಗೆಯ ಅಷ್ಟಕ, ಎಂಬ ಗ್ರಂಥಗಳನ್ನೂ ರಚಿಸಿರುವಂತೆ ತಿಳಿಯಬರುತ್ತದೆ ಈಗ ಅಚ್ಚಾಗಿರುವ ಭಾಮಿನೀಷಟ್ಪದಿರೂಪವಾದ ವಿರೂಪಾಕ್ಷಶತಕವೆಂಬ ಗ್ರಂಥವೂ ಏತತ್ಕೃತವೆಂದು ಕೆಲವರು ಹೇಳುತ್ತಾರೆ. ಹಾಗೆ ಹೇಳುವುದಕ್ಕೆ ಆವ ಆಧಾರವೂ ಇಲ್ಲ. ಈ ಗ್ರಂಥದಲ್ಲಿ 'ದೇವರಾಯನಿಗೆ ಪರವಿತ್ತು ಸಲಹುವುದು' ಎಂದಿರುವುದರಿಂದ ಇದು ಕ್ರಿ. ಶ. ೧೫ನೆಯ ಶತಮಾನದಲ್ಲಿದ್ದ ದೇವರಾಯನ ಕಾಲದವನಾದ ಆವನೋ ಒಬ್ಬ ಕವಿಯಿಂದ ವಿರಚಿತವಾಗಿರಬೇಕು.

"ಹರಿಹರನು ನರಸಿಂಹಬಲ್ಲಾಳನ ಆಳಿಕೆಯಲ್ಲಿ ಹಳೆಯಬೀಡಿನಲ್ಲಿ 'ಕರಣಿಕರ ಕುಲತಿಲಕ'ನಾಗಿ ಇದ್ದನು. ಈತನ ಗುರು ಹಂಪೆಯ ಮಾಯಿದೇವನು; ಈತನ ಸೋದರಳಿಯ ರಾಘವಾಂಕನು. ಈತನ ಕಾಲದಲ್ಲಿ ಕೆರೆಯ ಪದ್ಮರಸನು ನರಸಿಂಹಬಲ್ಲಾಳನಲ್ಲಿ ಮಂತ್ರಿಯಾಗಿದ್ದನು. ಈ ದೊರೆಯ ಮಗನಾದ ಬಿಟ್ಟಿಬಲ್ಲಾಳನು ಯುವರಾಜನಾಗಿದ್ದನು. ನರಸಿಂಹಬಲ್ಲಾಳನು ಹರೀಶ್ವರನನ್ನು ಲೆಕ್ಕವನ್ನು ಕೇಳಿದಾಗ ಈತನು ಕಡಿತವನ್ನು ಬಿಚ್ಚಿ ಕೈಗಳನ್ನು ಒರಸಿದಂತೆಯೂ, ದೊರೆ ಅದೇನೆಂದು ಕೇಳಲಾಗಿ- ಹಂಪಾವಿರೂಪಾಕ್ಷನಾಲಯದಲ್ಲಿ ಆರತಿಯನ್ನು ಎತ್ತಿದಾಗ ಅದರ ಸೆಕೆ ಹತ್ತಿ ಮೇಲ್ಕಟ್ಟಿನ ಬಟ್ಟೆ ಭಾಗಿಲಿಂದು ಉರಿವುದನ್ನು ಕಂಡು ಕೈಯಿಂದ ಒರಸಿ ಆರಿಸಿದೆನು ಎಂದು ಹೇಳಿದಂತೆಯೂ, ದೊರೆ ಆ ಮಾತನ್ನು ನಂಬದೆ ವಿರೂಪಾಕ್ಷಾಲಯಕ್ಕೆ ಒಬ್ಬ ದೂತನನ್ನು ಕಳುಹಿ ಹರಿಹರನು ಹೇಳಿದುದು ನಿಜವೆಂದು ತಿಳಿದು ಅತ್ಯಾಶ್ಚರ್ಯಪಟ್ಟು ಈತನನ್ನು ವಿರೂಪಾಕ್ಷಾಲಯದಲ್ಲಿ ಬರೆದು ಕೊಂಡಿರುವೆಂದು ಕಳುಹಿದಂತೆಯೂ, ಪದ್ಮರಸನು ಕಾಶಿಗೆ ಹೋಗುವಾಗ ಹಂಪೆಗೆ ಬಂದು ಈತನನ್ನು ನೋಡಿ- 'ಉಸಾವರಂ ನಿಮ್ಮ ಸಿಂದಿಗೆಂಟನೆಯ ಬೇಕೆ ತನ್ನೊಳ್ ನೆರೆದಿಲಿರ್ಪರಂ, ಅಂತರಿಂ ನೀನಿನಾಗ ಮಾಳ್ಪ ಮಹಾಕಾವ್ಯದೊಳ್† ಆನಿತಲಿಬೊಳ್ ಹರನೆಯ್ದಪ್ಪುದು ಎಂದು ಹೇಳಿಹೋದಂತೆಯೂ, ತನ್ನ ಸೋದರಳಿಯನಾದ ರಾಘವನು ಗತಿಸಿದ ಎಂಟುದಿನಕ್ಕೆ ಈತನು ಹಂಪೆ ವಿರೂಪಾಕ್ಷ

---

† ಈ ಮಹಾಕಾವ್ಯವು ಗಿರಿಜಾಕಲ್ಯಾಣವೇ ಆಗಿರಬಹುದು.

ಲಿಂಗದೊಳಡಗಿದಂತೆಯೂ, ಚೆನ್ನಬಸವಪುರಾಣ ಪದ್ಮರಾಜಪುರಾಣಗಳಿಂದ ತಿಳಿಯುಬರುತ್ತದೆ. ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಈತನ ವಿಷಯವಾಗಿ ಹೀಗೆ ಬರೆದಿದೆ:— ಪಂಪಾಕ್ಷೇತ್ರದಲ್ಲಿ ಒಪ್ಪುವ ಹಂಪೆಯುಶಂಕರಾಚಾರ್ಯರ ಮಗ ಮಾದರಸನು. ಅವನ ಮಗ ಹಂಪೆಯ ಹರೀಶ್ವರನು. ಈತನ ಗುರು ಮಾಯಿದೇವಾಚಾರ್ಯನು. ದೋರಸಮುದ್ರದ ಅರಸು ನೃಸಿಂಹಬಲ್ಲಾಳನು, ಪದ್ಮರಸರೆಂಬ ಆರಾಧ್ಯಪುಂಗವರ್ಗೆ ಪ್ರಧಾನಿಪಟ್ಟವಂ ಕಟ್ಟಿ ಹಂಪೆಯ ಹರೀಶ್ವರದೇವರ್ಗೆ ರಹಸ್ಯವ ಬರೆವ ಕರಣಿಕರಿಗೆಲ್ಲಾ ಹಿರಿಯತನವಂ ಕೊಟ್ಟು ಮಡಗಿಕೊಂಡಿರಲಾ ಹರಿಯಣ್ಣಪಂಡಿತನು ವಿಷ್ಣುವೊದಲಾದ ಅನ್ಯದೈವಕ್ಕೆ ಪೊಡೆಮಡಲೊಲ್ಲೆನು; ಗುಡಿಯ ಹೊಗಲೊಲ್ಲೆನು ಎಂದು ನೇಮವಂ ಮಾಡಿಕೊಂಡಿದ್ದನು. ಹರಿಹರೇಶ್ವರನ ಗುಡಿಯಲ್ಲಿ ಬ್ರಹ್ಮರಾಕ್ಷಸನನ್ನು ಓಡಿಸಿದನು. 'ಸರಸಮೃದುಮಧುರೋಪಮೆಗಳಿಂದ ವಸ್ತುಕವರ್ಣಕದಿಂದ ಶಿವನಂ ಶಿವಗಣಂಗಳಂ ರಗಳೆಗಳಿಂದ ನುತಿಸಿ ವಚನದ ರಚನೆ ಹೆಚ್ಚುವಂತೆ ಗಿರಿಜೆಯ ಕಲ್ಯಾಣವಂ ರಚಿಸಿದನು.' 'ಶತಕಾಷ್ಟಕಾಕ್ಷರಮಾಲಾಗದ್ಯವೊದಲಾದುವರಿಂದ ಶಿವನಂ ನುತಿಸಿದನು.'

"ಈ ಕವಿಗೆ ಹರಿದೇವ, ಹರಿಹರ, ಹರಿಗ, ಹರಿ, ಹರಿಯಣ್ಣಪಂಡಿತ, ಹಂಪೆಯ ಹರೀಶ್ವರ, ಎಂಬ ಹೆಸರುಗಳುಂಟು. 'ಪರಮಾನಂದಾಬ್ಧಿಪಂಪಾಪುರದರಸವಿರೂಪಾಕ್ಷ ಸಾಕ್ಷಾತ್ಸುಪುತ್ರಂ' ಎಂದು ಹೇಳಿಕೊಂಡಿದ್ದಾನೆ. ಹಂಪೆಯ ವಿರೂಪಾಕ್ಷನನ್ನೇ ತನ್ನ ಗ್ರಂಥಗಳಲ್ಲಿ ವಿಶೇಷವಾಗಿ ಕೊಂಡಾಡಿದ್ದಾನೆ.

"ಈತನನ್ನು ಪ್ರಾಯಶಃ ಎಲ್ಲಾ ವೀರಶೈವಕವಿಗಳೂ ಸ್ತುತಿಸಿದ್ದಾರೆ. ವೀರಶೈವ ಕವಿಗಳಲ್ಲಿ ಈತನೇ ಪ್ರಬಲನಾದ ಪೂರ್ವಕವಿಯೆನ್ನಬಹುದು.

ಈತನನ್ನು ಭೀಮಕವಿ (ಸು. ಶ. 1369) ತನ್ನ ಬಸವಪುರಾಣದಲ್ಲಿ

ಸರಸಮೃದುಮಧುರೋಪಮೆಗಳಂ ।
ಕುರಿಸೆ ವಸ್ತುಕವರ್ಣಕಂಗಳ ।
ನೆರಪಿ ಹರನಂ ಹರಗಣಂಗಳನೈದೆ ಕೀರ್ತಿಸಿದ ॥
ಧರೆಗುಭಯಕವಿ ಶರಭಭೇರುಂ ।
ಡರಸು ಕವಿ ಹರಿಬುಧವರನು...... ॥ ಎಂದೂ

ಪದ್ಮಣಾಂಕನು (ಸು. ಶ. 1385) ತನ್ನ ಪದ್ಮರಾಜಪುರಾಣದಲ್ಲಿ—

ಚದುರಿಂಪು ಸೊಂಪಲಂಕೃತಿ ಚಮತ್ಕೃತಿ ರೀತಿ ।
ಮೃದುಮಧುರಸರಸೋಪಮಾದ್ಯಖಿಳಲಕ್ಷಣಾ ।
ಭ್ಯುದಿತವಸ್ತುಕವರ್ಣಕಂಗಳಿಂ ಶಿವನಂ ಶಿವೈಕ್ಯರಂ ನುತಿಸುತಿರ್ದ ॥
......... ಶಿವಕವೀಂದ್ರಂ ॥ ಎಂದೂ,

ನೀಲಕಂಠನು (ಸು. ಶ. 15 ನೆಯ ಶತಮಾನ) ತನ್ನ ಆರಾಧ್ಯಚಾರಿತ್ರದಲ್ಲಿ

ಕಂಪಮರ್ದ ಚಂದನದ ಪಂಕದೊಳ್ ಪರಿಮಳಂ |
ಪೆಂಪುವಡೆದಂತೆ ರಸಭರಿತಪ್ರಬಂಧದೊಳ್ |
ಸೊಂಪುದೋಱುವ ಶಬ್ದಸಂದರ್ಭಮೊಪ್ಪುತಿರೆ ಪೊಸತಪ್ಪ ಯುಕ್ತಿಯಿಂದಂ ||
ಇಂಪಾಗಿ ಶಿವಗಣಪ್ರಕರಮಂ ಕೊಂಡಾಡಿ |
ಪಂಪೆಯೊಳು ಪಂಪಾವಿರೂಪಾಕ್ಷನೊಳಗವಿದ ||
ಪಂಪೆಯಹರೀಶ್ವರಂ ......... ||

ಎಂದೂ, ಸ್ತುತಿಸಿದ್ದಾರೆ. ಹೀಗೆಯೇ ಇನ್ನೂ ಅನೇಕ ವೀರಶೈವಕವಿಗಳೂ ಸ್ತುತಿಸಿದ್ದಾರೆ.

---

ಈ ಕವಿಚರಿತ್ರೆಯು "ಕರ್ಣಾಟಕಕವಿಚರಿತೆ" ಯಿಂದ ಉದ್ಧರಿಸಿದೆ. ಇದನ್ನು ಅನುವಾದ ಮಾಡಿಕೊಳ್ಳುವದಕ್ಕೆ ಅನುಮತಿಯನ್ನು ಕೊಟ್ಟುದಕ್ಕಾಗಿ ಆ ಗ್ರಂಥಕರ್ತರಿಗೆ ಬಹಳ ಕೃತಜ್ಞರಾಗಿರುತ್ತೇವೆ.

# ಹರಿಹರದೇವ ವಿರಚಿತಂ
# ಪಂಪಾಶತಕಂ.

---

ಶ್ರೀಸುದ್ರಾಜಕಳಾವತಂಸಹಿಮಚಂದ್ರಾರ್ಕಾಗ್ನಿದೇವಾನಿಲ ।
ವ್ಯೋಮಾದಿಪ್ರಕರಂಗಳಂ ಸಕಲಮುಂ ರಕ್ಷಿಪ್ಪ ಸರ್ವೇಶ್ವರಂ ॥
... ... ... ...
... ... ... ...

... ... ... ...
... ... ... ...
... ... ... ...
... ... ... ...

... ... ... ...
... ... ... ...
... ... ... ...
... ... ... ...

... ... ... ...
... ... ... ...
... ... ... ...
... ... ... ...

ಕರೆಪ್ಪುದೆಂದು ಕಾಲ್ವಿಡಿಸಿ ಕೊಳ್ವುದೆಂದು ದಯಾಕಟಾಕ್ಷದಿಂ ।
ಪೊರೆಪ್ಪುದೆಂದು ಪುಲ್ಲುಡಿಗಳಂ ಮದವೇಱಿಪ್ಪುದೆಂದು ನೋಂಕಿಸಿಂ ॥
ಹರಿಪ್ಪುದೆಂದು ಸಂತಸದೆ ಪೆರ್ಚಿಪ್ಪುದೆಂದು ಮನಸ್ಸಿ ನೀಂ ಕರಂ ।
ಕರಗಿಪ್ಪುದೆನ್ನ ನೆಂದೊಸೆದು ಪೋಱೆನಗಿಂದೆಲೆ ಪಂಪೆಯಾಳ್ದನೇ ॥ ೫

ತೆರೆವುಸಗಲ್ ಸುಖಾಶ್ರುವಿದಿರೇಱುತಿರಲ್ ಪುಳಕಂ ಬೆಮರ್ ಕರಂ ।
ಪರಿಯಿಪೆ ಗದ್ಗದಂ ಸುಱಿಗೊಳುತ್ತಿರೆ ಕಂಪನಮುರ್ಕಿ ಲೀಲೆಯೊ ॥
ತ್ತರಿಸುತಿರಲ್ ಮದೀಶ ನಿಜಭಕ್ತಿತರಂಗಿಣಿ ಮೀಱುತುಬ್ಬರಂ ।
ಬರಿವುತುಮೆನ್ನ ಮೇಲೆ ಮಡುಗಟ್ಟುವುದೆಂದೆಲೆ ಪಂಪೆಯಾಳ್ದನೇ ॥ ೬

ನಪೆತಂಬೆನ್ನಯ ಕಣ್ಗಳಲ್ಲಿರು ವಿರೂಪಾಕ್ಷಾ ವಿರೂಪಾಕ್ಷ ನೀಂ ।
ಬಿಡವಂತೆನ್ನಯ ಜಿಹ್ವೆಯಲ್ಲಿರು ವಿರೂಪಾಕ್ಷಾ ವಿರೂಪಾಕ್ಷ ನೀ ॥
ನೆಪೆಗೊಂಡೆನ್ನಯ ಚಿತ್ತದಲ್ಲಿರು ವಿರೂಪಾಕ್ಷಾ ವಿರೂಪಾಕ್ಷ ನೀ ।
ನಿಡಿವಂತೆನ್ನೊಳೆ ಕೂಡಿ ನಿಲ್ಗಲೆ ವಿರೂಪಾಕ್ಷಾ ವಿರೂಪಾಕ್ಷನೇ ॥ ೭

ನೋಡವ ಕಣ್ಗಳೇಕೆ ಸಲೆ ಕೇಳದ ಕರ್ಣಮದೇಕೆ ಭಕ್ತಿಯಿಂ ।
ಪಾಡವ ಬಾಯುದೇಕೆ ಪೆಸರ್ಗೊ*ಳ್ಳವ ಜಿಹ್ವೆಯದೇಕೆ ಪೂಜೆಯುಂ ॥
ಮಾಡವ ಕೈಗಳೇಕೆ ನೆಱೆ ಸೋಂಕವ ದೇಹಮದೇಕೆ ಕೂಡಿಯು ।
ಟ್ಯಾಡವ ಚಿತ್ತವೇಕೆನಗೆ ಪಂಪೆಯ ಲಿಂಗವೆ ನಿಮ್ಮೊಳಕ್ಕಱಿಂ ॥ ೮

ಎಂದುಂ ನಿಮ್ಮೊಳೆಲೇ ಮಹೇಶ್ವರ ಮನಂ ಬಂದಂತೆ ಚಿಂತಿಪ್ಪ ಕಣ್ ।
ಬಂದಂತೀಕ್ಷಿಪ ಜಿಹ್ವೆ ಬಂದ ತೆಱದಿಂ ಬಣ್ಣಿಪ್ಪ ಮೆಯ್ಯುಬ್ಬುರ್ತುಂ ॥
ಬಂದಂತಾಂ ಪುಳಕಿಪ್ಪ ಕೈಗಳನಸುಂ ಬಂದಂತೆ ಪೂಜಿಪ್ಪ ಕಾಲ್ ।
ಬಂದಂತಾಡುವ ಸೈಪು ಸಾರ್ಪುದೆನಗಿನ್ನೆಂದೋ ವಿರೂಪಾಕ್ಷನೇ ॥ ೯

ಇದು ಚಿತ್ರಂ ಪರಮಂತ್ರಸಂತತಿ ವಿರೂಪಾಕ್ಷಾವಿರೂಪಾಕ್ಷನೆಂ ।
ಬುದೆ ಮಾತಕ್ಕಟ! ತನ್ನ ಜೀವಮೆ ವಿರೂಪಾಕ್ಷಾ ವಿರೂಪಾಕ್ಷ ನಾ ॥
ಮದಿನಾಗಳ್ ಪುದಿದಂತಿರಿರ್ಪುದುಮಿದೇನೀತಂಗೆನುತ್ತೆಲ್ಲರುಂ ।
ಪದೆದೆನ್ನಂ ನುಡಿವಂದದಿಂ ನೆರೆವೆನಿನ್ನೆಂದೋ ವಿರೂಪಾಕ್ಷನೇ ॥ ೧೦

ಕ್ರಮದಿಂ ಪೂಜಿಪ ಪೂಜೆ ಮಲ್ಲನೆ ಸಡಿಲ್ದಾನಂದಮುಟ್ಟಾಡುತಿ ।
ರ್ಕೆಮ ಸೋತ್ಸಾಹದೆ ಕಣ್ಗಳೊಳ್ಸುಖರಸಂ ಹಸ್ತಂಗಳೊಳ್ಕಂಪನಂ ॥
ಕ್ರಮದೊಳ್ನರ್ತನಮಂಗದೊಳ್ಪುಳಕಮಾಜಿಹ್ವಾಗ್ರದೊಳ್ ಲಲ್ಲೆ ಸಂ ।
ಭ್ರಮದಿಂ ಪುಷ್ಕಲದೆಂದು ಪೂಜಿಸುವೆನಾಂ ನಿನ್ನಂ ವಿರೂಪಾಕ್ಷನೇ ॥ ೧೧

ಸತಿಪುತ್ರರ್ ಮಿತ್ರರಾಪ್ತರ್ ತನುಧನಮನಮೆಂಬಿಂತಿವಂ ನಿತ್ಯಮೆಂದು ।
ಚ್ಚತರವ್ಯಾಸಂಗದಿಂ ಮೆಯ್ಯಱಿಯದೆ ಮರುಳಾಗಿರ್ದ್ದೆನೆನ್ನಂ ದುರಾಶಾ ॥
ವೃತನಂ ದುರ್ಮ್ಮೋಹಿಯುಂ ದುಸ್ತರತರವಿಷಯವ್ಯಾಪ್ತನಂ ದುರ್ಧರ್ರೈನೋ ।
ಹತನಂ ಮಜ್ಜೋರ್ಗ್ಧನಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ ॥

ಅನುಪಮದಾನಿಯಪ್ರತಿಮದಾನಿ ನಿರಂತರದಾನಿ ನಂದ ಪೆಂ ।
ಪಿನ ಘನದಾನಿ ಕೌತುಕದ ದಾನಿ ಮಹೋನ್ನತದಾನಿಯೆಂದು ನಿ ॥
ನ್ನನೆ ಪೊಗಳುತ್ತುಮಿಂತಿರೆ ಸಮಸ್ತಜಗಜ್ಜನವೀಸುಕೀರ್ತಿಗೆ ।
ನ್ನನೆ ನಪೆ ನೋಡದಿರ್ಪರವದರ್ಕನುಕೂಲಮೆ ಹಂಪೆಯಾಳ್ದನೇ ॥ ೧೩

ನಾನಾಜನ್ಮಂಗಳೊಳ್ಬಾರದ ಪರಿಭವಮಂ ಬಂದ ತನ್ನಂದಮಂ ತಾ ।
ನೇನೆಂದೊಂದೆಳ್ಳನಿತ್ತುಂ ನೆನೆಯದು ತನಗೆಂತಿಚ್ಛೆಯಂತಿರ್ದುರ್ ನಿನ್ನೀ ॥
ಧ್ಯಾನಾರಂಭಕ್ಷಣಂ ಸಲ್ಲದು ಸುಡು ಸುಡು ಛೀ! ಮನ್ಮನೋವೃತ್ತಿ ನಿನ್ನಂ ।
ತಾನಾರೆಂ ನೀನೆ ಸಂತಂ ನಿಲಿಸಿದನೊಲವಿಂದಂ ವಿರೂಪಾಕ್ಷಲಿಂಗಾ ॥ ೧೪

ಪಸಿವಿಂದಂ ಬೇಂಟೆಗಂ ನಟ್ಟಡವಿಗೆ ನಡೆತಂದೇಱಿ ಬಿಲ್ವಾಗ್ರಮಂ ವ್ಯಾ ।
ಪಿಸವತ್ತಿತ್ತಂ ಮೃಗಧ್ಯಾನದೊಳಿರೆ ಶಿವರಾತ್ರಿವ್ರತಂಗೆಯ್ದನೆಂದಂ ॥
ದೊಸೆದಾಬೇಡಂಗೆ ಕೈಲಾಸದ ವಸತಿಯನಿತ್ತೋವಿದೈ ಪ್ರಾಣದಾನ ।
ಚಿರ್ಸಿ ನಿನ್ನಂ ನಂಬಿದಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ ॥ ೧೫

ಮೋಹಕ್ಕೋರೊರ್ಮೆ ಮಾಧುರ್ಯದ ನುಡಿನೆಲೆಗೋರೊರ್ಮೆ ಸಂದಿರ್ಪ
ಕಾಮೋ । ತ್ಸಾಹಕ್ಕೋರೊರ್ಮೆ ಮೆಯ್ವೆರ್ಚಿದವಿದಮದಕೋರೊರ್ಮೆ
ಪೆರ್ಚಿರ್ದಲೋಭ ॥ ವ್ಯಾಹಕ್ಕೋರೊರ್ಮೆ ಕೋಪೋನ್ನತಿಯನುಮತಿ
ಗೋರೊರ್ಮೆ ಮೆಯ್ವೆರ್ಚಿ ಮದ್ದೋ ॥ ಹೋಹಂ ಎಂದೆಂಬುದಂ ಮಾಣಿ
ಸು ಮನಕಮಿದೊಂದಂ ವಿರೂಪಾಕ್ಷಲಿಂಗಾ ॥ ೧೬

ಮದನವಿರೋಧಿ ಬಾರ ದುರಿತಾಂತಕ ಬಾರ ಪುರಾರಿ ಬಾರ ಶಾ ।
ರದಶಶಿಮೌಳಿ ಬಾರ ಫಣಿಕುಂಡಲ ಬಾರ ಮಹೇಶ ಬಾರ ಪು ॥
ಣ್ಯದ ನೆಲೆವೆರ್ಚಿ ಬಾರ ಸತತಂ ಪೊರೆವಾಳ್ದನೆ ಬಾರ ಮೋರೆದ ।
ಪ್ಪಿಗ ಕರುಣಾಬ್ಧಿ ಬಾರ ವರ ಬಾರೆಲೆ ಬಾರೆಲೆ ಹಂಪೆಯಾಳ್ದನೇ ॥ ೧೭

ಚರಣಂಗಳ್ಕೀಯೊೞೆ ಲೋಚನಯುಗಂ ನೀರೊೞೆ ಮೆಯ್ಯೆಲ್ಲವಂ।
ಘುರವೇೞಲ್ ನುಡಿ ಕಂಪವೇೞೆ ಕರಣಂಗಳ್ ಲೀಲೆಯೊೞಲ್ಪೊಗಂ ॥
ಸಿರಿಯೊೞಲ್ ತಲೆಗೇೞಿಪುತ್ತವದೆ ನಿನ್ನಂ ಪೂಜಿಸುತ್ತಾನುಸಾ ।
ದರದಿಂದೀಕ್ಷಿಸುತಾಡುತಿರ್ಪ ಬೆನಗಿನ್ನೆಂದೋ ವಿರೂಪಾಕ್ಷನೇ ॥ ೧೮

ಕಯ್ಗೆ ನಮೋನಮೋ! ಪಡೆದು ಕಂಪಿಸುತೀಶ್ವರ ನಿಮ್ಮ ನಚಿರ್ಪಾ।
ಬಾಯ್ಗೆ ನಮೋನಮೋ! ತೊದಳದುಣ್ಮುತೆ ಭಕ್ತಿಯೊಳಯ್ದೆ ಪಾಡುವಾ॥
ಮೆಯ್ಗೆ ನಮೋನಮೋ! ಪುಳಕವಂ ಕಲಸಾಚರ್ತೆ ಸೋಂಕಿ ಪೆಚರ್ವಾ।
ಸುಯ್ಗೆ ನಮೋನಮೋ! ಬಿಡದ ಲಲ್ಲೆಯ ನೇಹದ ಪಂಪೆಯಾಳ್ದನೇ॥ ೧೯

ಉಡುವೊಡೆ ಸಂತತಂ ಪುಲಿದೊವಲ್ ನಿಮಗಲ್ಲದೊಡಾದಿಗಂಬರಂ।
ಪಡುವೊಡೆ ರುದ್ರಭೂಮಿ ನಿಮಗಲ್ಲದೊಡಾಗಿಗವೋತ್ತಮಾಂಗವು ॥
ಕೊಳ್ವಡೆ ವಿಷವಲ್ಲದಿರ್ದೊಡೆ ಸಮಸ್ತಜಗಂ ನಿಮಗೇನನೆಂಬಪೆಂ ।
ತುಡುವೊಡೆ ಸರ್ಪನಲ್ಲದೊಡೆ ಕುಂಜರಚರ್ಮವೆ ಪಂಪೆಯಾಳ್ದನೇ॥ ೨೦

ನವನಿಧಿ ಬಾರ ಪುಣ್ಯನಿಧಿ ಬಾರ ಮಹಾನಿಧಿ ಬಾರ ಭಕ್ತರು ।
ತ್ತವನಿಧಿ ಬಾರ ಭಾಗ್ಯನಿಧಿ ಬಾರ ಕೃಪಾನಿಧಿ ಬಾರ ಕಾಂತ್ರಿಯು ॥
ಢ್ವವನಿಧಿ ಬಾರ ನಿತ್ಯನಿಧಿ ಬಾರ ಕೃಪಾನಿಧಿ ಬಾರ ಸತ್ಯಸಂ ।
ಭವನಿಧಿ ಬಾರ ತತ್ತ್ವನಿಧಿ ಬಾರೆಲೆ ಬಾರೆಲೆ ಪಂಪೆಯಾಳ್ದನೇ ॥ ೨೧

ವಿನುತಬ್ರಹ್ಮಾಂಡಮಂ ಪುಟ್ಟಿಪ ಹರಹರ ಪಾಲಿಪ್ಪ ಸಾಮರ್ಥ್ಯದೊಂದೊಂ।
ದನುವಂ ಕಂಡಾಗಳಾಪಿರ್ಂದಜಹರಿಗಳನಾಂ ಬಣ್ಣಿಸುತ್ತಿರ್ಪೆನೇ ಭೋಂ ॥
ಕನೆ ನಿಮ್ಮೊಂದಾಜ್ಞೆಯಿನ್ನೀ ಮನಕೆ ಮಸಕದಿಂ ನಂದು ತೋಚಲ್ಕೆ ಪ್ರೀನ।
ಜ್ಞಿನ ವಾಕ್ಯಂ ಪುಟ್ಟಿಸಲ್ ಸುಮ್ಮನಿರುತೆ ಮುಜವಟ್ಟಂ ವಿರೂಪಾಕ್ಷಲಿಂಗಾ॥

ಪರಹರ ಕರ್ಮದೊಳ್ ಬಟಿಲದಿಂತು ಬರ್ಮುಂಕಿದೆನ್ನೆ ಸದಾಶಿವಾ! ।
ನರಪರ ಸೇವೆಯೊಳ್ ಕುದಿಯದಿಂತು ಬರ್ಮುಂಕಿದೆನ್ನೆ ಮುರಾರಿಯು॥
ಸ್ಥಿರಪರದೈವದೊಳ್ ತೊಡರದಿಂತು ಬರ್ಮುಂಕಿದೆನ್ನೆ ಮಹೇಶ! ಮ ।
ಗ್ಗರುವೆ ಪುರಾರಿ! ಪ್ರಾಜ್ಞನೆ ನಿಜಾಂಘ್ರಿಗೆ ಸಾರ್ದಿಲೆ ಪಂಪೆಯಾಳ್ದನೇ॥ ೨೩

ದೇವ ಮಹೇಶ ದೇವ ಗಿರಿಜಾಧಿಪ ದೇವ ಸಮಸ್ತದೇವಸಂ |
ಜೀವನ ದೇವ ಕಾಮಮದಮರ್ದನ ದೇವ ಹಿರಣ್ಯಗರ್ಭವಿ ||
ದ್ರಾವಣ ದೇವ ವಿಷ್ಣುನಯನಾರ್ಚಿತಪಾದಪಯೋಜ ದೇವ ಸಂ |
ಸೇವಿತದೇವದೇವ ಮಮರಕ್ಷಕ ರಕ್ಷಿಸು ಪಂಪೆಯಾಳ್ದನೇ || ೧೪

ಪುರಮಂ ಸುಟ್ಟವನೀತನೀತನೆ ಪರಬ್ರಹ್ಮಂಗೆ ಸಾಮರ್ಥ್ಯದೊಂ |
ದಿರವಂ ಕೊಟ್ಟವನೀತನೀತನೆ ಮಹೋಗ್ರಾಭೀಳಸರ್ಪಂಗಳಾ ||
ಭರಣಂದೊಟ್ಟವನೀತನೀತನೆ ಲಸಚ್ಛೀತಾಂಶುವಂ ಮೌಳಿಯೊಳ್ |
ಸ್ಥಿರವಾಗಿಟ್ಟವನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ || ೧೫

ಪರಮೇಶ ಪ್ರಭುವೀತನೀತನೆ ದಿಟಂ ನಂಬಿರ್ದ ಭಕ್ತಂಗೆ ತ |
ನ್ನಿರವಂ ತೋಱುವನೀತನೀತನೆ ಜಗತ್ಸಂಹಾರವಂ ಮಾಡುವಾ ||
ಗರಳಂದಾಳ್ದವನೀತನೀತನೆ ನಗವರ್ಗಂ ಪೆರ್ಚೆ ವಾಣೀಶನಂ |
ಶಿರವಂ ಕಿಟ್ತವನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ || ೧೬

ವಸುಧಾವಂದಿತನೀತನೀತನೆ ಮಹಾನಾಟ್ಯಾಭಿರಂಗಂ ವಿರಾ |
ಜಿಸಲಂದಾಡಿವನೀತನೀತನೆ ಸಿತಾಂತಂ ಭಕ್ತಯೂಥಕ್ಕೆ ಸಂ ||
ತಸಮಂ ಸಾರ್ಚುವನೀತನೀತನೆ ಮುರಾರಿಬ್ರಹ್ಮರೊಲ್ದೊಲ್ದು ಪೂ |
ಜಿಸುವೀಶಪ್ರಭುವೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ || ೧೭

ಸ್ಮರನಂ ನೋಡಿದನೀತನೀತನೆ ಸಮುದ್ಯತ್ಕೋಪದಿಂ ದಕ್ಷನ
ಧ್ವರಮಂ ಸುಟ್ಟವನೀತನೀತನೆ ಕಡುತ್ತೆಯ್ತಂದು ನಿಂದಂಧಕಾ ||
ಸುರನಂ ಮೆಟ್ಟಿದನೀತನೀತನೆ ಕರಂ ಬಂದಾರ್ಪಿನಿಂದಂ ಗಜಾ |
ಸುರನಂ ಸೀಳ್ದವನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ ||

ಜಿತತೃಷ್ಣಾಯುಧನೀತನೀತನೆ ಸರೋಜಾತಾಕ್ಷವಾಣೀಶವಂ |
ದಿತಸರ್ವೇಶ್ವರನೀತನೀತನೆ ಸಹಸ್ರಾಕ್ಷಪ್ರಮುಖ್ಯಾಮರಾ ||
ರ್ಚಿತಪಾದಾಂಬುಜನೀತನೀತನೆ ಕಪಾಲಾಭೀಲಮಾಲಾವಿರಾ |
ಜಿತವಕ್ಷಸ್ಸ್ಥಳನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ || ೧೯

ನತದೇವಾಧಿಪನೀತನೀತನೆ ವಿರಿಂಚೋಪೇಂದ್ರಮಧ್ಯಸ್ಥಿತೋ।
ದ್ಧತಲಿಂಗೋನ್ನತನೀತನೀತನೆ ಸಹಸ್ರಾಂಶುಪ್ರತಾನಾತುಳೋ ॥
ನ್ನತತೇಜೋಮಯನೀತನೀತನೆ ಪರಂಜ್ಯೋತಿಸ್ಸ್ವರೂಪಪ್ರಕಾ ।
ಶಿತಪುಣ್ಯೋದಯನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ॥ ೨೦

ತ್ರಿಜಗತ್ಪೂಜಿತನೀತನೀತನೆ ಸುರರ್ ಕೊಂಡಾಡೆ ದಿವ್ಯಾಸ್ತ್ರಮಂ ।
ವಿಜಯಂಗಿತ್ತವನೀತನೀತನೆ ಮನಂ ಮುಟ್ಟಿಪರ್ ನಿಷ್ಠಾಸಂಭ ॥
ಕ್ತಜನಕ್ಕಾಶ್ರಯನೀತನೀತನೆ ಲಸತ್ಸಾಮರ್ಥ್ಯದಿಂದಂ ಶಿರೋ ।
ವ್ರಜಮಂ ತಾಳ್ದವನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ ॥ ೨೧

ವೇದಕ್ಕುನ್ನತನೀತನೀತನೆ ಪರಿಬ್ರಹ್ಮಾದಿಗಳ್ ಮಾಟ್ಪಸಂ ।
ವಾದಕ್ಕಗ್ಗಳನೀತನೀತನೆ ಪರಸ್ಪ್ರಕ್ಕಿರ್ದ ಭಕ್ತಾಳಿಯಂ ॥
ಕಾದುಂ ರಕ್ಷಿಪನೀತನೀತನೆ ಗಣವ್ರಾತಕ್ಕೆ ತಾಯ್ತಂದೆ ತಾ ।
ನಾದಾಶಂಕರನೀತನೀತನೆ ವಿರೂಪಾಕ್ಷಂ ಲಲಾಟೇಕ್ಷಣಂ ॥ ೨೨

ಶ್ರೀಗಂಗಾಧರನಂ ಶಶಾಂಕಶಿಖಿಮಾರ್ತಂಡತ್ರಿನೇತ್ರಾಂಕನಂ ।
ಭೋಗೀಂದ್ರಾರ್ಚಿತನಂ ರತೀಶವಿಪಿನಪ್ರೋದ್ಭೂತದಾವಾಗ್ನಿಯಂ ॥
ಯೋಗಿವ್ರಾತಪರೀತನಂ ಶರಣವೃಂದಾಜೀವಸಂಪ್ರಾರ್ಥ್ಯನಂ ।
ನಾಗೇಂದ್ರಾಜಿನದಿವ್ಯವಸ್ತ್ರಧರನಂ ಕಂಡೆಂ ವಿರೂಪಾಕ್ಷನಂ ॥ ೨೩

ಹರನಂ ಶಂಕರನಂ ಶಶಾಂಕಧರನಂ ಕಾಪಾಲಿಯಂ ಕಾಲನಂ ।
ಹರನಂ ಶೂಲಿಯನೀಶನಂ ಗಿರಿಶನಂ ಫಾಳಾಕ್ಷನಂ ನೀಲಕಂ ॥
ಧರನಂ ಭರ್ಗನನುಗ್ರನಂ ಪರಮನಂ ಸರ್ವಜ್ಞನಂ ಶಂಭುವಂ ।
ಗಿರಿಜಾವಲ್ಲಭನಂ ಮನೋಜಹರನಂ ಕಂಡೆಂ ವಿರೂಪಾಕ್ಷನಂ ॥ ೨೪

ಎನ್ನಾನಂದಸುಧಾಬ್ಧಿವರ್ಧನಕಳಾಸಂಪನ್ನನಂ ಚೆನ್ನನಂ ।
ಮುನ್ನಾರುಂ ನೆರೆ ಕಾಣಬಾರದ ಲಸತ್ಕಾಪಾಲಿಯಂ ಶೂಲಿಯಂ ॥
ಭಿನ್ನಾಭಿನ್ನಮೆನಲ್ಕೆ ಬಾರದ ಮಹಾಸಿಸ್ಲೀಮನಂ ಭೀಮನಂ ।
ಚೆನ್ನಂಗಂದುರೆ ತನ್ನನಿತ್ತ ವಿಭುವಂ ಕಂಡೆಂ ವಿರೂಪಾಕ್ಷನಂ ॥ ೨೫

ಆನಂದಾಮೃತವಾರ್ಧಿಯಂ ಕೃಪೆಯೊಳ್ನಿನ್ನಂ ತೊಬ್ತಿಗೊಂಡಾಳ್ದನಂ |
ನಾನಾದೇವಕಿರೀಟಕೋಟಿವಿಲಸತ್ಪಾದಾಬ್ಜನಂ ಭೃತ್ಯನಂ ‖
ತಾಪಾಂಭೋಧಿಸುಧಾಂಶುವಂ ದುರಿತಘೋರಧ್ವಾಂತಮಾರ್ತಂಡನಂ |
ಭಾನುಜ್ಯೋತಿಗತರ್ಕ್ಯಕಾಂತಿಯುತನಂ ಕಂಡೆಂ ವಿರೂಪಾಕ್ಷನಂ‖ ೩೬

ಅದೆ ನಾಗಾಸುರನುಗ್ರಚರ್ಮವದೆ ಮೇಣ್ ವ್ಯಾಘ್ರಾಸುರಾಕೃತ್ತಿ ನೋ |
ಡದೆ ನಾರಾಯಣನೊಂದು ದೇಹವದೆ ತನ್ನೇತ್ರಂ ಸುರೇಂದ್ರಾದಿಗಳ್ ‖
ಬೆದರಲ್ಕಪ್ರತಿಮಪ್ರತಾಪನಿಧಿಯುಟ್ಟಂ ತೊಟ್ಟನಾರ್ದೆತ್ತಿದಂ |
ಪದದೊಳ್ ಪತ್ತಿಸಿದಂ ಭಭಾಸ್ವರೆ! ವಿರೂಪಾಕ್ಷಂ ಲಲಾಟೇಕ್ಷಣಂ ‖ ೩೭

ಗಣನೆಗೆ ಜಿಹ್ವೆಯುಂಟೆನಿಪ ಗರ್ವದೆ ಸಾವಿರನೋರ್ವ್ವೊ ದೇವರಂ |
ದಣಿಸದರಣ್ಣ ಪಂಪೆಯರಸಂ ಸಿಟಿಲಂದೆಱೆದಿಂ ಬಱುಕ್ಕಮು ‖
ತ್ತಣ ಹರಿಯೆತ್ತಣಬ್ಜಭವನೆತ್ತಣ ವಾಸವನೆತ್ತಣಗ್ನಿಯು |
ತ್ತಣ ಯಮನೆತ್ತಣ ತ್ರಿದಶಸಂಕುಳವೆತ್ತಣಭಾಸ್ಕರೇಂದುಗಳ್ ‖ ೩೮

ಬೆಳಗಿಂತೆಲ್ಲಿಯುಮಲ್ಲಿ ಪ್ರೋಗದೆ ಅಹಾ! ಆಃ! ಅಕ್ಕಟಾ! ಜೆಃಪ್ರವ |
ಗ್ರಳದಿಂದಂ ತ್ರಿಪುರಂಗಳಂತವನದಾಹಂ ಸುಟ್ಟನಮ್ಮಮ್ಮ! ಭಳಾ ‖
ತಳದೊಳ್ಕೀನಱುವಾಂತನಲ್ತು ಸಿರದಿರ್ ಮತ್ತಾಂತು ಬಿಟಂ ಪೇಳ್ವೆನೇ |
ತ್ರಿಳಿಯಲ್ ಹೋ! ಮದನಾರಿ ಪಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ‖ ೩೯

ಮದನಂ ಪುಬಿರ್ದಿಸಿ ಬಿಲ್ಲುಮಂ ಸರಲುಮಂ ಕೈಕೊಂಡು ಬಂದಾರ್ದು ಸ |
ಮ್ಮದದಿಂದೆಚ್ಚೊಡೆ ಸಚ್ಚರಿತ್ರವಿಭು ನಿಷ್ಕಾಮಿ ಸ್ವತಂತ್ರಂ ಸಕೋ ‖
ಪದೆ ಘುಘುರ್ಘುರ್ಘುರಿಲೆಂಬಿನಂ ನೆಗಟ್ಟಿ ನೇತ್ರಜ್ವಾಲೆಯಿಂ ತೊಟ್ಟನೋ |
ವದೆ ಸುಟ್ಟಂ ಮರುಭಾಸ್ತ್ರ! ಪಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ‖ ೪೦

ಮುಳಿದು ಘುಗಿಲ್ಬುಗಿಲ್ಬುಗಿಲೆನಲ್ ಸುಡನೇ ತ್ರಿಪುರಂಗಳಂ ಪೃಢ |
ರ್ದಬಿಯ ಘರಿಲ್ಘುರಿಲ್ಘುರಿಲೆನಲ್ ಸುಡನೇ ಕುಸುಮಾಸ್ತ್ರನಂ ಕರಂ ‖
ಕೆಳೆಯ ಛಿಳಿಲ್ಛಿಳಿಲ್ಛಿಳಿಲೆನಲ್ ಸುಡನೇ ಯಮನಂ ಮನುಷ್ಯರಿಂ |
ತಿಳಿವ್ರೊಡಸೇತ್ರಿಯುಂ ಬಿಸುಟಿಸು ನಂಬಿ ಶರಣ್ಬುಗು ಪಂಪೆಯಾಳ್ದನಂ‖ ೪೧

ಭಕ್ತರ ಬಂಧು ಭಕ್ತರ ಮಹಾನಿಧಿ ಭಕ್ತರ ಭಾವಸಂಪದಂ ।
ಭಕ್ತರ ಮಾತೆ ಭಕ್ತರ ಪಿತಂ ನಿಜಭಕ್ತರ ಪುಣ್ಯದೇಱ್ತರಂ ॥
ಭಕ್ತರ ಮೂರ್ತಿ ಭಕ್ತರ ಸುಧಾಂಬುಧಿ ಭಕ್ತರ ಜೀವಮುನ್ನತಂ ।
ಭಕ್ತರ ಪೆಂಪು ಭಕ್ತಜನಕಂ ನೆರೆ ಹಂಪೆಯ ದೇವನೊಚ್ಚತಂ ॥ ೪೩

ಶರಣಂ ಸಂಸಾರಿಯೇ ಮಾಣ್ ಪ್ರಸಿತ್ರಸಿಯೆನಸುಂ ಕಾಮಿಯೇ ಪೇೞಲೆಂ
ತುಂ । ಶರಣಂ ತಾಂ ಕ್ರೋಧಿಯೇ ಸಲ್ಲದು ತೆಗೆ ಶರಣಂ ಮರ್ತ್ಯನೇ ಅಲ್ಲ
ವೈ ಕೇಳ್ ॥ ಶರಣಂ ಸಿವಮಾರ್ಗಿಯನೆಂತುಂ ಶರಣನತುಳನಿಷ್ಕಾಮಿಯೆಲ್ಲಂದ
ದಿಂದಂ । ಶರಣಂ ಶಾಂತಂ ನಿತಾಂತಂ ಶರಣನಮನು ತಾನೇ ವಿರೂಪಾಕ್ಷಲಿಂಗಂ ॥

ಅದು ಕಣ್ಣಪ್ಪನ ಪೂಜೆಯೋೞಜೆ ಬಗೆಯಲ್ವೇದೋಕ್ತಮೋ ಬೇಂಟೆಯಾ ।
ಡಿದ ಜೊಮ್ಮಣ್ಣನ ಭಕ್ತಿಭಾವವಱಿಯಲ್ ವೇದೋಕ್ತಮೋ ತಂದೆಯೊ ॥
ನ್ನದೆ ಚಂಡೇಶ್ವರಪಿಕ್ಕೈ ಮಾಡಿದುದು ಪೇೞ್ವೇದೋಕ್ತಮೋ ಆತನೊ ।
ಲ್ದುದೆ ವೇದಾಗಮನೀತಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ ॥ ೪೪

ಉಣಿಸುಂ ಸ್ತ್ರೀಸಂಗಮುಂ ನಿದ್ರೆಯುಮಿವು ಮಲಮೂತ್ರಂಗಳುಂ
ಕುಂದುಗುಂ ಸ । ದ್ಗುಣಮುಂ ಶಾಂತತ್ವಮುಂ ಕಾಂತಿಯುಮುರುತರಸಾ
ರೋಗ್ಯಮುಂ ಪೆರ್ಚುಗುಂ ಸಂ ॥ ದಣಿಸಿದಾರ್ಕ್ರೋಧಮುಂ ಮತ್ಸರಮತಿ
ಭಯಮುಂ ಮೋಹಮುಂ ಗರ್ವಮುಂ ತ । ಲ್ಲಣಮುಂ ತೀರ್ಗುಂ ದಿಟಂ
ನಿನ್ನಯ ನಿಜಶರಣಂಗಂ ವಿರೂಪಾಕ್ಷಲಿಂಗಾ ॥ ೪೫

ಪರಿಕಿಪರುಂಟೆ ಹಂಪೆಯಧಿನಾಥನ ಭಕ್ತರ ಸದ್ಗುಣಂಗಳಂ । ಪರಪರ
ಪೇೞ್ವೊಡೆನ್ನಳವೆ ಕೇಳ್ವೊಡೆ ನಿನ್ನಳವೇ ಪುರಾತನರ್ ॥ ಪರಿದುದೆ ಗಂಗೆ
ನಿಂದುದೆ ಸುತೀರ್ಥಮೊಡರ್ಚಿದುದೇ ಸುಕಾರ್ಯಮಿ । ನ್ನಱಿಯುವರಿರ್ಪು
ದೇ ಸಭೆ ನಿರೀಕ್ಷಣೆಗೆಯ್ದುದೆ ಲೋಕಪಾವನಂ ॥ ೪೬

ಇದು ದಿಟವೆಮ್ಮ ಹಂಪೆಯಧಿನಾಥನ ಭಕ್ತರ ಮುಂದದಾವನೋ । ಅದಿ
ರದೆ ನಿಲ್ವನಂತಕಮನೋಜಚತುರ್ಮುಖನಬ್ಜನೇತ್ರನೆಂ ॥ ದೊಡವಿದತ
ರ್ಕ್ಯರೆಂಬವಗೆ ಸುಟ್ಟಸಬಾರದು ರೂಹುದೋಱಬಾ । ರದು ತಲೆಯೆತ್ತ
ಬಾರದೆಮೆಯಿಕ್ಕಲೆ ಬಾರದಿಳಾತಳಾಗ್ರದೊಳ್ ॥ ೪೭

ಉರಿ ನಡೆವಂತೆ ಭಾನು ನಡೆವಂತೆ ಸಿಡಿಲ್ ನಡೆವಂತೆ ನಿನ್ನ ಭ ।
ಕ್ತರ ನಡೆ ದೂಷಕಾವಳಿಗೆ ಪಂಪೆಯ ದೇವನೆ ಸಾತ್ವಿಕರ್ಗೆ ಸ ॥
ಚ್ಚರಿತಶಿವಾರ್ಚಕರ್ಗೆ ಸುಖಪೂರಿತಶಾಂತಿವಿಭೂಷಣರ್ಗೆ ಕೇಳ್ ।
ಸಿರಿ ನಡೆವಂತೆಯಿಂದು ನಡೆವಂತೆ ಸುಖಂ ಸುಳಿವಂತೆ ಧಾತ್ರಿಯೊಳ್ ॥ ೪೮

ಘನಚೋದ್ಯಂ ನಿನ್ನ ಭಕ್ತಾಳಿಯ ನಡೆವಳಿ ಬೇಱೊಂದು ಸತ್ವಂಸ್ಥಿ ಬೇ
ಱೊಂ । ದು ನಿಜಂ ಬೇಱೊಂದು ದೇಹಾಕೃತಿ ಹರಹರ! ಬೇಱೊಂದು ಸಂ
ಪತ್ತಿ ಬೇಱೊಂ ॥ ದನು ಬೇಱೊಂದಿಚ್ಛೆ ಬೇಱೊಂದಘಟಿತಘಟಿತಂ ಬೇಱು
ದೊಂದಾಜ್ಞೆ ಬೇಱೊಂ । ದಿನಿದಾಹಾ! ಕೌತುಕಂ ಸುಟ್ಟಿಸಲರಿವರಿದೋ
ಹೋ! ವಿರೂಪಾಕ್ಷಲಿಂಗಾ ॥ ೪೯

ಜಾಣರದುಂಟದುಂಟಹಹ! ದುರ್ವಿಷಯಂಗಳನೊಂದಿ ಬಾಳ್ವವರ್ ।
ಜಾಣರದುಂಟದುಂಟಹಹ! ಕಾಲನ ಬಾರಿಗೆ ಬಿಟ್ಟು ನೋವವರ್ ॥
ಜಾಣರದುಂಟದುಂಟಮಮ! ದುಸ್ಸ್ಪೃಹೆಯೊತ್ತಿ ಮುಸುಂಕಿ ಸಾವವರ್ ।
ಜಾಣರೆ ಜಾಣರಿಂದಿಹಪರಕ್ಕಲೆ ಭಕ್ತರೆ ಪಂಪೆಯಾಳ್ದನೇ ॥ ೫೦

ಇಲ್ಲಿ ಜಗಕ್ಕೆ ಪೂಜಿತರುಮಲ್ಲಿ ಪರಕ್ಕೆ ವಿಶೇಷಪೂಜ್ಯರಿಂ ।
ತ್ರಿಲ್ಲಿಯುಮಲ್ಲಿಯುಂ ಮೆಱೆವರೆಲ್ಲಿಯುಮೆಮ್ಮ ಶಿವಾರ್ಚಕರ್ಗೆ ಮಾ ॥
ಣೆಲ್ಲಿಯು ವಿಷ್ಣುವೆಲ್ಲಿಯಜನೆಲ್ಲಿಯ ವಾಸವನೆಲ್ಲಿಯಗ್ನಿಯಿಂ ।
ತೆಲ್ಲಿಯ ಮಾತು ಮೂಜಗದೊಳಾರ್ ಸರಿ ಪೇೞಲೆ ಪಂಪೆಯಾಳ್ದನೇ ॥ ೫೧

ನೋಡಿತೆ ಮಂಗಳಂ ನೆನೆವೆ ಮಂಗಳಮಿರ್ದೆಡೆ ಮಂಗಳಂ ಕರಂ ।
ಪಾಡಿತೆ ಮಂಗಳಂ ಶರಣರೆಂಬುದೆ ಮಂಗಳವೊಲ್ದವರ್ ಮನಂ ॥
ಗೂಡಿತೆ ಮಂಗಳಂ ನಡೆಯೆ ಮಂಗಳಮಾಡಿತೆ ಮಂಗಳಾತ್ಮಕಂ ।
ಮಾಡಿತೆ ಮಂಗಳಂ ಪರಮಮಂಗಳವೈಯಿಲೆ ಪಂಪೆಯಾಳ್ದನೇ ॥ ೫೨

ಕಲಿಯನಾತಂ ಕಾಂತನಾತಂ ಕಮನಭರಿತನಾತಂ ಕಲಾಕಲ್ಪನಾತಂ ।
ಕಲೆಯನಾತಂ ಭೋಗಿಯನಾತಂ ಭರಣವಿನುತನಾತಂ ಚಿದಾನಂದನಾತಂ ॥
ಚಲಿಯನಾತಂ ಸತ್ಯನಾತಂ ಬುಧಜನಹಿತನಾತಂ ಜಗತ್ಪೂಜ್ಯನಾತಂ ।
ಸಲೆ ನಿಮ್ಮಂ ನಂಬಿ ನಿಚ್ಚಂ ಮಱೆಯದೆ ನೆನೆವಾತಂ ವಿರೂಪಾಕ್ಷಲಿಂಗಾ ॥ ೫೩

ಕಲಿಯಾವಂ ಶಿವಭಕ್ತನಚ್ಚಸುಚಿಯಾವಂ ಭಕ್ತನಾವೃತ್ತದಿಂ ।
ಚಲಿಯಾವಂ ಶಿವಭಕ್ತನುತ್ತಮನದಾವಂ ಭಕ್ತನೆಲ್ಲಂವದಿಂ ॥
ಬಲಿಯಾವಂ ಶಿವಭಕ್ತನೂರ್ಜಿತನದಾವಂ ಭಕ್ತನೀಶಂಗೆ ಜೇ ।
ಟ್ಪೊಲವಾವಂ ಶಿವಭಕ್ತನುನ್ನತಯಶಂ ಭಕ್ತಂ ವಿರೂಪಾಕ್ಷನಾ ॥ ೫೪

ಕೊಂದಂ ಭಕ್ತಿಪ್ರರಸ್ಪರಂ ಮಗನನಾಶ್ರೀಯಾಳನೇನಾಯ್ತು ಮೇಣ್ ।
ಕೊಂದಂ ಭಕ್ತಿಪ್ರರಸ್ಪರಂ ಜನಕನಂ ಚಂಡೇಶನೇನಾಯ್ತು ಪ್ರೇ ॥
ಕೊಂದಂ ಭಕ್ತಿಪ್ರರಸ್ಪರಂ ಜನಸಿಯುಂ ತಾಂ ರಾಮನಾಥಂಗದೇಂ ।
ಕುಂದಾಯ್ತೇ ತೆಗೆ ಭಕ್ತಿಯುಳ್ಳೊಡೆ ಸದಾಚಾರಂ ವಿರೂಪಾಕ್ಷನಾ ॥ ೫೫

ಮದಮುಂ ಪೊಣ್ದು ದುರಾಶೆಯುಂ ಪಱಿದು ಕಾಮಾಸಕ್ತಿಯುಂ ಬಿಟ್ಟು ಸ ।
ಮ್ಮದದಿಂ ಲಿಂಗಮನೊಲ್ದು ನೋಡಿ ನಲಿವಾಸದ್ಭಕ್ತನಪ್ಪಾತನಿ ॥
ರ್ದೆಡೆ ತಾರಾಚಲಮಾತನಿರ್ದೆಡೆ ಹಿಮಾದ್ರೀಂದ್ರಂ ಬಱಿಕ್ಕಾತನಿ ।
ರ್ದೆಡೆ ವಾರಾಣಸಿಯಾತನಿರ್ದೆಡೆ ವಿರೂಪಾಕ್ಷಂಗೆ ಪಂಪಾಪುರಂ ॥ ೫೬

ಪೆಱತೊಂದಂ ನುಡಿಯಂ ಪ್ರಪಂಚರಹಿತಂ ಕಾರ್ಪಣ್ಯಮುಂ ಮಾಡನೊ ।
ಲ್ದೆಱಗಂ ಕಾಸುವ ಬಟ್ಟೆಯತ್ತಲೆಳಸಂ ತರ್ಕಕ್ಕೆ ಮಾತ್ಸರ್ಯಮಂ ॥
ಪಱಿಯಂ ಲೋಕದ ಮಾನಸರ್ಗೆ ಮಣಿಯಂ ಸದ್ಭಕ್ತಸತ್ಸಂಗಮಂ ।
ತೊಱೆಯಂ ಸತ್ಯಮನಲ್ಲದಾಡನಚಲಂ ಭಕ್ತಂ ವಿರೂಪಾಕ್ಷನಾ ॥ ೫೭

ನಿರಪೇಕ್ಷಂ ಕರುಣಾಕರಂ ಸುಖಮಯಂ ಶಾಂತಂ ಮಹೋತ್ಸಾಹಿ ಭ ।
ಕ್ತಿರತಂ ಮುಗಳಮೂರ್ತಿ ಲಿಂಗಸುಲಭಂ ಸಂತೋಷಿ ಸತ್ಯಂ ವಿಸು ।
ತ್ಸರನುರ್ವೀಜನವಂದ್ಯನುನ್ನತನನೇಕಾಶ್ಚರ್ಯಯುಕ್ತಂ ಮಹೇ ।
ಶ್ವರನಾತಂಗರಿದುಂಟೆ ಪಂಪೆಯ ವಿರೂಪಾಕ್ಷಪ್ರಸಾದಾನ್ವಿತಂ ॥ ೫೮

ಶಿವಭಕ್ತರ್ ಮುಕ್ತಿಸಂಭಾಷಣಮೆ ಸಕಲತೀರ್ಥಂಗಳೆಂದೆಂಬುದಂ ಕಂ ।
ದೆವಲಾ ಕಣ್ಣಪ್ಪನೊಳ್ ಮಾಡಿಸುದೆ ಜಗಕೆ ಸನ್ಮಾರ್ಗಮೆಂದೆಂಬುದಂ ಕಂ ॥
ದೆವಲಾ ಜೊಮ್ಮಣ್ಣನೊಳ್ ಮೆಚ್ಚಿದ ಫಲ ಪರಮಕ್ಷೇತ್ರಮೆಂದೆಂಬುದಂ ಕಂ ।
ದೆವಲಾ ಘೋಗಣ್ಣನೊಳ್ ಪೋ! ಶರಣರ ಪರಿಪ್ರೈವಂ ವಿರೂಪಾಕ್ಷ ನಿನ್ನಾ ॥

ನತರಾಗಲ್ ಕಾವಪರ್ ನಿಂದಿರಲಸವಸದಿಂ ಕೊಂದಪರ್ ಭೀತಿಯೊಳ್ ಸಂ ।
ಯುತರಾಗಲ್ ಬಿಟ್ಟಪರ್ ತಾಂ ಮಱೆವುಗಲಸೆವ್ವುಗಂ? ಪವಂವರ್ಪರತ್ಯು ॥
ನ್ನತೆಯಿಂ ಸಾಕೋರ್ವ್ವಿಯುಂ ಜೀವಮಸುರೆ ಕಾಡುವರ್ ಮಾನದೊಳ್ ಶೌರ್ಯ
ದೊಳ್ ವಾ । ರತೆಯೊಳ್ ಭಕ್ತರ್ಗೆ ಪೋ! ಮಾಣ್ ಸರಿ ದೊರೆ ಸಮನಾ
ಪಂ ವಿರೂಪಾಕ್ಷಲಿಂಗಾ ॥ ೬೦

ಅವನಂ ನೋಡಿದ ಕಣ್ಗೆ ಮತ್ತೆ ಕೆಲವ್ರಂ ರೂಪೇ ವಿರೂಪಾಕ್ಷನೆಂ ।
ಬವನಂ ಪುಟ್ಟಿದ ಕೈಗೆ ಮತ್ತೆ ಕೆಲವ್ರಂ ಮೆಯ್ಯೇ ಪೆಸಗೆಟ್ಟಿ ಮು ॥
ಚ್ಚಿ ಪ್ರಣಕ್ಕುಕ್ಕಟ! ನೋಡ ಮತ್ತೆ ಕೆಲವ್ರಂ ನಾಮಂಗಳೇ ಸ್ತೋತ್ರಮಂ।
ಸಪದಾನಾಲಗೆಗೊರ್ವ್ವ ಮತ್ತೆ ಕೆಲವ್ರಂ ವಾಣ್ಮಾಣ ಶಬ್ದಂಗಳೇ ॥ ೬೧

ಪ್ಯಡನಿರ್ಗಂತ್ರಿತೆ ಕೋಟಿಕೂಟಕುಬ್ಯದ್ವೈಸಕ್ತಾಸೆಯುಂ ಮಾಡದಿರ್ ।
ಕಿಡದಿರ್ ಮಾನವ ಬೇಡ ಬೇಡ ಸಲೆ ಪ್ರಾಣ್ಗಂಡಕ್ಕಟಾ! ಸಾರಿದೆಂ ॥
ನತೆನೋಡಚರ್ಿಸು ಕೀರ್ತಿಸಾವರಿಸು ಮತ್ತಾನಂದದಿಂ ಬೇಡು ಬ ।
ಲ್ವಿಡಿ ನಂಬೀಗಳೆ ನಚ್ಚು ಮೆಚ್ಚು ನಲವಿಂದಂದುಂ ವಿರೂಪಾಕ್ಷನಂ ॥ ೬೨

ಸಾಲದೆ ನಿನ್ನ ಚಂಚಲತೆ ಸಾಲದೆ ನಿನ್ನ ಮದೋದ್ಧತಾಗುಣಂ ।
ಸಾಲದೆ ನಿನ್ನ ದುರ್ಮ್ಮತಿ ಸಾಲದೆ ನಿನ್ನ ತಮೋವಿವರ್ಧನಂ ॥
ಸಾಲದೆ ನಿನ್ನ ದುಷ್ಪ್ರಕೃತಿ ಸಾಲದೆ ನಿನ್ನ ದುರಾಶೆಯುಜ್ಜುಗಂ ।
ಸಾಲದ ಮೋಹದಿಂ ಪ್ರಮನವೇ ಪೆನೆ ಪಂಪಿನ ಹಂಪೆಯಾಳ್ವನಂ ॥

ಅಕ್ಷಯಸಂಪದಂ ಕಿಡದ ಕೀರ್ತಿಯನೂನಪರಾಕ್ರಮಂ ಧರಾ ।
ರಕ್ಷಣಶಕ್ತಿ ದರ್ಪಕನನೇಳಿಪ ರೂಪಿನಿತೆಲ್ಲವಣ್ಣ ಕೇ ॥
ಳೀಕ್ಷಣದಿಂದೆ ಬರ್ಪುದೆಲೆ ಮಾನವ ಪ್ರಾಣದಪರ್ನಿಶಂ ವಿರೂ ।
ಪಾಕ್ಷನನರ್ಚಿಸು ನ್ನತನನರ್ಚಿಸಜಾತನನರ್ಚಿಸಲ್ಕಿಱಿಂ ॥ ೬೪

ಬಿಡು ಕರ್ಮ್ಮಂ ದೈವಮೆಂದೆಂಬವರ ಬಿಸುಡಿಯುಂ ಬ್ರಹ್ಮರೊಳ್ದಕ್ಷನೆಂಬಂ।
ಪ್ರಡನೇಕಂಪೆಲ್ಲರಂ ಬಲ್ಲರನೆ ನೆರಪಿಕೊಂಡಾಡಿದಾಯಜ್ಞ ಕರ್ಮ್ಮಂ ॥
ಗಡ! ಭಸ್ಮೀಭೂತಮೇನಾಗದೆ ಸುಡು! ಸುಡು! ಮತ್ತಂ ವೃಥಾಕರ್ಮ್ಮಮೊಂದು।
ಗ್ರಹಿಸಲ್ವೇತೊಳ್ಪುನಂ ಬೇತಭವನನೊಸೆದೀವಂ ವಿರೂಪಾಕ್ಷಲಿಂಗಂ ॥೬೫

ಬಿಡು ಮೋಹಮ್ಮಾಕೆಲೆ ಬೊಮ್ಮಪಾದಿ ಸಟೆಯಂ ನೀಂ ನಂಬಿಗೋಯೆನ್ನನೇ
ಮೃಡನಂದಾಡನೆ ನಮ್ಮ ಗೊಡೆಯನ ಮುಂದಾಪಾಸಿಮುಯ್ಯಂ ಕುತ್ತ ॥
ಲ್ಕುಡನೇ ಸಿರಿಯನುಣ್ಣನೇ ಸಿರಿಯನಾಳ್ವಂ ಪೇೞೆ ಕೈಲಾಸಮಂ ।
ಕುಡನೇ ಸೂರೆಯನೆಮ್ಮ ನಿಂಬಿಗೆ ವಿರೂಪಾಕ್ಷಂ ಲಲಾಟೇಕ್ಷಣಂ ॥ ೬೬

ಕೊಡಗೂಸೊರ್ವಳದೊಂದು ಬಟ್ಟಲೊಳೆ ಪಾಲಂ ತಂದು ಮುಂದಿಟ್ಟ
ನೀಂ । ಕುಡಿಯೆಮ್ಮವ್ವೆ ದಿಟಂ ಹರಂ ಬಡಿವಳೆಂದಟ್ಟಿಟ್ಟು ಕಾರ್ಪಣ್ಯದಿಂ ॥
ನುಡಿಯಲ್ಕಾನುಡಿಗಂಜಿ ತಾನರರೆ! ಕಾರುಣ್ಯಾಕರಂ ಜಾಟಿಯಿಂ । ಕುಡಿ
ದಂ ಪಾಲನದೇಂ ಕೃಪಾಳುವೊ ವಿರೂಪಾಕ್ಷಂ ಲಲಾಟೇಕ್ಷಣಂ ॥ ೬೭

ಮುಪಮಂ ಧಾತ್ರಿಗೆ ಮಾಟ್ಪುದಾವುದು ಶಿವಾಚಾರಂ ಗಣಾಧೀಶನ ।
ಭ್ಯುದಯಕ್ಕಾಸ್ಪದಮೆಂಬುದಾವುದು ಸದಾಚಾರಂ ಶಿವಾಚಾರವು ॥
ಲ್ಲದೆ ಬೇಱಿಲ್ಲದು ತಾನೆ ವಾಂಛಿತಕರಂ ನಂಬಾಗಳುಂ ಸಾರ್ದು ನೀಂ ।
ಪಸಪಿಂ ಮಾನವ ಮಾಡು ಲೇಸಿದು ಶಿವಾಚಾರಂ ವಿರೂಪಾಕ್ಷನಾ ॥ ೬೮

ಅನುಪಮಮಾರ್ಗವೆಮ್ಮ ಶಶಿಮೌಳಿಯ ಸಚ್ಚರಿತಂ ಧರಿತ್ರಿಗೊ ।
ರ್ವನೆ ಗಣನಾಥನೆಂಬ ಶಿವಭಕ್ತನ ನೇಮವನೊಲ್ದು ನೋಡಿ ನ ॥
ಚ್ಚಿನ ಸುಖಮೇಱೆ ಲೋಕವಱಿಯಲ್ ಪೊಗಳೇಱಿಸಿ ಕೊಂಡುಪ್ರೇವನಾ ।
ತನನನಿಮಿತ್ತಬಂಧುವನದೇನೆನುತಿರ್ಪ ಪಂಪೆಯಾಳ್ದನಂ ॥ ೬೯

ಸ್ಮರನಿಂ ಬೆಂಪುರಿಸಂಗೆ ರೋಗತತಿಯಿಂದಂ ನೊಂದಬಲ್ವಂಗೆ ನಿ ।
ಷ್ಠುರಮುಗ್ರಂ ಪರುಷಂಗಳಿಂ ಬಱಲ್ವಂಗತ್ಯುಗ್ರತಾಪಂಗಳಿಂ ॥
ಕೊರಗುತ್ತಳ್ಕುವವಂಗೆ ಶತ್ರುಭಯದಿಂ ಬೆಳ್ಕಾಗಿ ಬೀೞ್ವಂಗೆ ಸಾ ।
ಪರದಿಂ ಕಾಯಲಿದೊಂದೆ ಸಾಲ್ವುದು ದಿಟಂ ನಾಮಂ ವಿರೂಪಾಕ್ಷನಾ ॥ ೭೦

ಮನವೊಸೆದರ್ಚಿಸರ್ಚಿಸು ಪೊಗೞ್ಪೊಗೞಾಳ್ದನನಾಳ್ದನಂ ಕರಂ ।
ನೆನೆನೆನೆ ನೋಡುನೋಡು ಮಱೆಗೊಳ್ ಮಱೆಗೊಳ್ ನೆರೆ ನಂಬುನಂಬು ಕೆ ॥
ಮ್ಮನೆ ಕೆಡಬೇಡ ಬೇಡ ಭರದಿಂ ಸಲೆ ಮುಚ್ಚಲೆ ಮುಚ್ಚುಮುಚ್ಚು ವಂ ।
ಚನೆಗಿಸೆ ನಚ್ಚುನಚ್ಚು ಮಿಗೆ ಬಳ್ವಿಡಿ ಬಳ್ವಿಡಿ ಪಂಪೆಯಾಳ್ದನಂ ॥ ೭೧

ಭರದಿಂ ಲಿಂಗಾರ್ಚನಂಮಾಡದ ಶಿವಕುಲವುಂಟೇ ಶಿವಾಚಾರಮಂ ಸ |
ದ್ಗುರುವೆನ್ನಂ ಪೇಳ್ದನಂತಂತದರವರೊಲವಿಂ ಸ್ವೇಚ್ಛೆಯಿಂ ಶಬ್ದನಂ ಶಂ ||
ಕರನಂ ಸರ್ವಜ್ಞನಂ ಪೂಜಿಸುವುದಱೊಳಗಂತಾಯಿತಿಂತಾಯಿತೆಂದೆ |
ಲ್ಲರ ಮಂದಾಕ್ಷೇಪದಿಂ ಸೀಂ ಕಿಡದೆ ನೆನೆ ವಿರೂಪಾಕ್ಷನಂ ಕಾಂಕ್ಷೆಯಿಂದಂ ||

ಗುರುಮತದಿಂ ಶ್ರುತಿಸ್ಮೃತಿಮತಂಗಳ್ನಿಷ್ಠಮತಂಗಳಿಂದಮಾ |
ದ್ಯರ ಮತದಿಂದೆ ನೀನೊಡೆಯನೆಂದಱಿದೀಶ್ವರ ನಿನ್ನನರ್ಚಿಸ ||
ಲ್ಕರಿಯದೆ ಸರ್ವರೊಳ್ ಪಱಮು ತರ್ಕಿಸಿ ನೋಯಿಸಿ ನೋಯುತುಂ ವೃಥಾ |
ನೆರೆಮನೆಗಟ್ಟಿ ಕಣ್ಗಿಡುವರೇಂ ಮರುಳ್*ಗೊಂಡರೊ ಹಂಪೆಯಾಳ್ದನೇ || ೨೩

ತೆಗೆ ತೆಗೆ ಮಿಕ್ಕ ಕೂಟಕುಟಿದೇವರನಾವಗಮರ್ಚಿಸದಿಕ್ಕುಱುಂ |
ಬಗೆ ಬಗೆ ಚಂದ್ರಚೂಡನ ಪದಾಂಬುಜಮಂ ಮನವಾಱೆ ಭಕ್ತಿಯಿಂ ||
ದಗಿವಗಿಪಂಗದೊಳ್ ಪುಳಕಮೇಳ್ತರಲೆಳ್ದು ಪೊಗಳ್ದು ಲೀಲೆಯಿಂ |
ನೆಗೆನೆಗೆದಾಡಿ ಮೆಯ್ಮಱೆದು ಪೂಜಿಸು ಮಾನವ ಹಂಪೆಯಾಳ್ದನಂ || ೨೪

ಇದು ದಲ ಪೂರ್ವದೀ ಮನುಜಜನ್ಮದೊಳುದ್ಭವಿಸಿರ್ದು ಮೂಗನಾ |
ಗದೆ ಸಲೆಯಂಧನಾಗದೆಲೆ ಪಂಗುವುಮಾಗದೆ ಕೂನದೇಹನಾ ||
ಗದೆ ವಿಕಟಾಂಗನಾಗದೆ ಕಿವುಡನುಮಾಗದೆ ಹೀನವರ್ಣನಾ |
ಗದೆ ಮೆಱೆವಲ್ಲಿ ಮಾನವ ಮಹೋತ್ಸವದಿಂ ನೆನೆ ಹಂಪೆಯಾಳ್ದನಂ || ೨೫

ಆಱುತುಮರ್ಚಿಸುಬ್ಬರಿಸುತರ್ಚಿಸು ಮತ್ತೊಲೆಯುತ್ತುಮರ್ಚಿಸಿಂ |
ಪೇಱುತುಮರ್ಚಿಸುನ್ನತಿಯೊಳರ್ಚಿಸು ಕೊರ್ವುತುಮರ್ಚಿಸೆಲ್ಲರೊಳ್ ||
ಸೇಱುತುಮರ್ಚಿಸೀಜನನಮಂ ಪಡೆದಲ್ಲಿ ಮನುಷ್ಯ ಏನುಮಂ |
ಪಾಱದೆಯರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ || ೨೬

ಎಲೆಲೆಲೆ ಸಾರಿದೇನೆಲೆಲೆ ಸಾರಿದೆನಕ್ಕಟ! ಸಾರಿದೆಂ ವೃಥಾ |
ಚಲಿಸದಿರಿಲ್ಲಿ ಪುಟ್ಟುವುದಪೂರ್ವಮಪೂರ್ವಮಪೂರ್ವಮುಕ್ತಿಯಿಂ ||
ನಲಿನಲಿದುಬ್ಬಿ ಬೊಬ್ಬಿಡುತೆ ಕೊಬ್ಬುತೆ ಕೂಗುತೆ ಪಾಡುತಾಡುತ |
ಗ್ಗಲಿಸುತೆ ಬೇಗಿ ತೂಗುತೊಸೆದರ್ಚಿಸು ಮಾನವ ಹಂಪೆಯಾಳ್ದನಂ || ೨೭

ಮನೆ ನೆಲೆಯಾಗೆ ಪೆಂಡಿರಿನಿದಾಗೆ ಸುತರ್ ಪಿರಿದಾಗೆ ಯರ್ಥದಾ ।
ಜರ್ನೆ ಘನಮಾಗೆ ಯೌವನಮದಾಗೆ ಬಱಿಕ್ಕನನೇನನೆಂದಪೆಂ ॥
ತನತನಗುಬ್ಬಿ ತಂಕುರಿಸುತುಂ ನೆರೆ ಪಲ್ಲವಿಸುತ್ತೆ ಪರ್ವುತುಂ ।
ನನೆಕೊನೆವೋಗಿ ಪಾಯು ಕೊಬಱಿಡದೆ ಪಣ್ಣಳೆ ಪಂಪೆಯಾಳ್ದನೇ ॥

ವರಸುಖ್ಯಂ ಶಂಕರಾಖ್ಯಂ ಸಕಲಜನಹಿತೋದ್ಭಾಷ್ಯನಾನಂದಸೌಖ್ಯಂ ।
ಸ್ಥಿರಕಾಯಂ ತಾನಜೇಯಂ ಧವಳತರತನುಚ್ಛಾಯನಾನಂದಕಾಯಂ ॥
ಪರಕಾಲಂ ಗೀತಲೋಲಂ ಕಮಲಭವಶಿರಶ್ಶೂಲನೌದಾರ್ಯಶೀಲಂ ।
ಕರುಣಾಂಗಂ ವೀತಸಂಗಂ ಮನಸಿಜಮದಭಂಗಂ ವಿರೂಪಾಕ್ಷಲಿಂಗಂ ॥ ೭೯

ಎನಗಾಳ್ದಂ ತಾನೆ ನೀಳ್ದಂ ಕರಿಪತಿತನುವಂ ಸೀಳ್ದು ನಿಂತೊಪ್ಪೆ ಬಾಳ್ದಂ ।
ಘನಗಾಢಂ ವೇದಗೂಢಂ ಸಕಲಗುಣಗಣಪ್ರೌಢನತ್ಯಂತರೂಢಂ ॥
ದ್ಯುನದೀಶಂ ಚಿತ್ಪ್ರಕಾಶಂ ಶರಣಜನಸದಾತೋಷನಾನಂದಕೋಶಂ ।
ಮುನಿಸಂಗಂ ಸತ್ಯಶೃಂಗಂ ಕರುಣರಸತರಂಗಂ ವಿರೂಪಾಕ್ಷಲಿಂಗಂ ॥ ೮೦

ಪೊಗಟೆಂ ಮಿಕ್ಕಿನ ಚಕ್ರಪಾಣಿಸರಸೀಜೋದ್ಭೂತಸಂಕ್ರಂದನಾ ।
ದಿಗಳಂ ತಾನನೆ ಮರ್ತ್ಯಕೀಟಕರ ಮಾತಂತಿರ್ಕೆ ಮತ್ತಾವನಂ ॥
ಪೊಗಟ್ವೈ*ಯಂಬಿಸಿತೇ ಪರಂಗೆ ಶಶಿಭೂಷಂಗೀಶ್ವರಂಗೆಯ್ದೆ ನಾ ।
ಲಗೆಯಂ ಮಾಱಿದೆನೊಲ್ದು ಪಂಪೆಯ ವಿರೂಪಾಕ್ಷಂಗದೇನೆಂದಪೆಂ ॥ ೮೧

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ ।
ತನತನಗಿಂದ್ರಚಂದ್ರರವಿಕರ್ಣದಧೀಚಿಬಲೀಂದ್ರನೆಂದು ತಾ ॥
ನನವರತಂ ಪೊಗಟ್ದು ಕಿಡಬೇಡಲೆ ಮಾನವ ಸೀನಪರ್ಸಿಶಂ ।
ನೆನೆ ಪೊಗಟಿರ್ಚಿಸೆನ್ನ ಕಡುಸೊಂಪಿನ ಪೆಂಪಿನ ಪಂಪೆಯಾಳ್ದನಂ ॥ ೮೨

ಎಣೆಯಿದೊಡಿಲ್ಲ ಸಿರಿ ಸಿರಿದಾದೊಡಮಿಲ್ಲುಸಿರಿಕ್ಕುತಿರ್ಪಸಿರ್ ।
ತನೆದೊಡಮಿಲ್ಲ ಬಿಕ್ಕು ಬಿಡವೊತ್ತಿದೊಡಂ ತರಿಸಂದೊಡಿಲ್ಲ ಸೀಂ ॥
ತೊಡೆ ಸಬೆಯಿಲ್ಲ ಕಮ್ಮಿದೊಡಮಿಲ್ಲವಿದಿಂತಿರದಿಂತು ಕೆಟ್ಟು ಪೋ ।
ಪಡಲಿದಕೇಕೆ ಕಾಮವಿದಕೇಕೆ ಮದೋನ್ನತಿ ಪಂಪೆಯಾಳ್ದನೇ ॥ ೮೩

ಜನಿಯಿಸುತಿರ್ಪ ಕೋಟಿಜನನಂಗಳೊಳುತ್ತಮಮತ್ರ್ಯಪೂರ್ವಮಿ । 
ಮನುಜಭವಂ ವಿಚಾರಿಪೊಡಿದಂ ಪಡೆದುಂ ಮರುಳಾಗಿ ಸತ್ಪ್ರತೀ ॥ 
ಜನನವಿದೆಂತು ಬರ್ಪುದು ವೃಥಾ ಕಳದಿರ್ ಕಳದಿರ್ ನಿರಂತರಂ । 
ನಿನಗೆ ಹಿತೋಪದೇಶಮಿದು ಮಾನವ ಪೂಜಿಸು ಪಂಪೆಯಾಳ್ದನಂ ॥ ೮೪

ತನ್ನಯ ಕಾಮಮಂ ಸುಡದೆ ತನ್ನಯ ಕೋಪಮುಮಂ ತೆರಳ್ಚದೇ । 
ತನ್ನಯ ಲೋಭಮೋಹಮನೆ ತನ್ನ ಮನೋಹೃತ ಮತ್ಸರಾದಿಯಂ ॥ 
ತನ್ನೊಳೆ ತಾನೆ ಸಂತವಿಡಲೊಲ್ಲದೆಯನ್ಯರನಿಂತು ಮಾನವಾ । 
ತ್ತಂ ನೆರೆ ಪೇಳ್ದು ಬುದ್ಧಿಗಲಿಸಲ್ ತರಪಲ್ಲಿತು ಪಂಪೆಯಾಳ್ದನೇ ॥ ೮೫

ಪೆಂಡತಿ ಬಾರಳರ್ಥವದು ಬಾರದು ಪುತ್ರರೆ ಬಾರರಿಷ್ಟರುಂ । 
ಕಂಡ ಸಖೀಜನಂ ಜನನಿಯುಂ ಬರರಾ ನೆರೆ ಬಾರವಕ್ಕಟಾ! ॥ 
ತಂಡದ ಪಾಪಪುಣ್ಯವಿವೆ ಬರ್ಪುವಿವರ್ಕೆ ಮಹೇಶನಂ ನತಾ । 
ಖಂಡಲವೃಂದನಂ ಬಿಡದೆ ಪೂಜಿಸು ಮಾನವ ಪಂಪೆಯಾಳ್ದನಂ ॥ ೮೬

ನರರಂ ಸೇವಿಪ ಜೀಯಜೀಯೆನುತುಮಿರ್ಪೀನೆಂದೊಡಂ ದೈನ್ಯಮು । 
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ ॥ 
ರ್ಪ ರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂವಂದು ಶಂ । 
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ ॥ ೮೭

ಪೋಗೆನೆ ಪೋಪ ಬಾರಲವ್ರೆ ಬಾರೆನೆ ಜೀಯ ಪಸಾದವೆಂದು ಬೆ । 
ಳ್ಳಾಗುತೆ ಬರ್ಪ ಮಾಣಲವ್ರೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ ॥ 
ತ್ತಾಗಳೆ ಬಗ್ಗಿಸಲ್ ನಡುಗಿ ಬೀಳುವ ಸೇವಿಪ ಕಷ್ಟವೃತ್ತಿಯಂ । 
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ ಪಂಪೆಯಾಳ್ದನೇ ॥ ೮೮

ಎಲೆಲೆಲೆ ಮೆಟ್ಟಿ ಕಿಟ್ಟಿನಿಖಿಯಾ ಕಾಮಜೋಗ್ರವನೂರ್ಧ್ವಪಕ್ಷ್ಮನಂ । 
ತಲೆಕೆಳಗಾಗೆಲತ್ತಿ ಬಿಸನಂದಖಿಯಾ ನಲವಿಂ ಮುಕುಂದನ ॥ 
ಗ್ಗಲಿಸುವ ದೇಹಮಂ ತೊವಲನುಚಿದನೆಂದಖಿಯಾ ಗಜಾಸುರಾ । 
ಕಲಿತಶರೀರಮಂ ಬಿಡು ಘಡಾರ್ಪವನಾಪಸೊ ಪಂಪೆಯಾಳ್ದನೊಳ್ ॥ ೮೯

ಮನುಜರ್ ಗಾವಿಲರೇನನೆಂಬೆನಖಿಳಸಂಗಾತರ್ಂಗೆ ದಂಭಂಗೆ ದು ।
ರ್ಜನಶೀಲಂಗೆ ಶಿವದ್ರೋಹಜೀವನಸವ್ಯಥಾಲಾಪಂಗೆ ಚಿಃ! ಕಾಕಘೋಷ ‖
ಜನಮುಂ ಮಾಡುವರಲ್ಲದೆಚ್ಚ ಶಿವಭಕ್ತಂಗೀಶಯುಕ್ತಂಗೆ ಲಾಂ ।
ಛನಗುಪ್ತಂಗಮದೀಪರುಂಟೆ ಧರೆಯೊಳ್ ಪಂಪಾವಿರೂಪಾಕ್ಷನೇ ‖ ೯

ಶಿವಶಿವ ಪುಣ್ಯಬಂಧುವೆ ಪುರಾತನಬಂಧುವೆ ಸರ್ವಜೀವಬಂ ।
ಧುವೆ ಪರಮಾರ್ಥಬಂಧುವೆ ಸುಖಪ್ರದಬಂಧುವೆ ಬಾರನಾಥಬಂ ‖
ಧುವೆಯುನಿಮಿತ್ತಬಂಧುವೆ ಮನೋಹರಬಂಧುವೆ ಆತ್ಮಪೂರ್ವಬಂ ।
ಧುವೆ ಸಕಲೈಕಬಂಧುವೆ ಅನಾರತಬಂಧುವೆ ಪಂಪೆಯಾಳ್ದನೇ ‖ ೯೧

ಎರಡುಂಟೆಂದೆನುತಿರ್ಪ ಪಾತಕರ ಮಾತಂ ಮೀಱುವೆಂ ಮೀಱುವೆಂ ।
ಹರನೊರ್ವಂ ಗುರುವೆಂಬ ಡಂಗುರವನಂ ನಾಂ ಸಾಱುವೆಂ ಸಾಱುವೆಂ ‖
ಪರವಾದಿಪ್ರಕರಕ್ಕೆ ತಳ್ತೊಡೆ ವಿರೂಪಾಕ್ಷಪ್ರಸಾದತ್ವದಿಂ ।
ಪರದೃಷ್ಟಾಂತದುಸಿರ್ಗಳೀಗಳೊಲವಿಂದಂ ತೋಱುವೆಂ ತೋಱುವೆಂ ‖ ೯೨

ಜಗದೊಳಗೆಲ್ಲ ನೋಡುವೊಡೆ ಸತ್ಯಮೆ ಶ್ರೀವಿ ತುಱಿಂಕುತಿರ್ಪುದೈ ।
ಬಗವೊಡೆ ಭಕ್ತನೊರ್ವನವಱೊಳ್ ನೆರೆ ಸತ್ಯಮನಾದಲಾತನೇ ‖
ಪಗೆಯುಸಿಸಿರ್ಪುದೇಕೆಲ ಅಸತ್ಯಮೆ ಕಾಂ ಪಿರಿದಾಗೆಯುಂತವಂ ।
ಬಗೆಯುದೆ ಸತ್ಯಮಂ ನುಡಿಯುತಚರ್ಚಿಸುತಿರ್ಪುದು ಪಂಪೆಯಾಳ್ದನಂ ‖ ೯೩

ಪರಿಯುಂ ಕೃಷ್ಣಾವತಾರಾಂತ್ಯದೊಳಗೆ ಶಬರಂ ಕಾಲನೆಚ್ಚಲ್ಲಿ ಪೋಗಲ್ ।
ಹರಣಂ ಕೊಂಡಾಡುತಿರ್ಪರ್ ಶಬರರವನನುಂ ವಿಷ್ಣುದೇವಂಗಳಂ ಶಂ ‖
ಕರನುಟ್ಟಿಂ ತೊಟ್ಟನೆಂದೀಶರಣರೆನೆ ಕರಂ ಸತ್ಯವೆಂಬಾವಿವೇಕಂ ।
ಪರಮಾಣಂ ಪುಟ್ಟಿದೀಪಾಪಪತರ ನುಡಿಯೇವಾಚ್ಚ ಪಂಪಾಧಿನಾಥಾ ‖ ೯೪

ಪರಿನಯನಾರ್ಚಿತಾಂಘ್ರಿಯುಗಳಂ ಪರಿವೇಷನಿಶಾಯಭೂಷಣಂ ।
ಹರಿಹರನೆಂಬು ನಿನ್ನ ನಿಜಕೀರ್ತನೆಯಂ ಶರಣಾಳಿ ಕೂಡೆ ತಂ ‖
ಗುಱಿಸುತೆ ಸತ್ಯಮಂ ನುಡಿಯೆ ಸೇರದ ಪಾಪಪತಗೆರ್ ನಿಂದೆಯುಂ ।
ತಿರೆ ಸಲುತಿರ್ಪರಿಂತಿವರ ಪಾಪಮನಟ್ಟರಿ ಪಂಪೆಯಾಳ್ದನೇ ‖ ೯೫

ಶ್ರುತಿಯುಂ ಪೇೞ್ವುದೆ ನಿಂದೆ ಸತ್ತ್ವಮೆ ಕರಂ ಸ್ತೋತ್ರಂ ಪರಂಗೆಯ್ವುದುಂ ।
ಶ್ರುತಿಯಲ್ಲಂತವಱಿಂದೆ ವಿಷ್ಣುನಯನಾಂಭೋಜಾರ್ಚಿತಂ ವಿಷ್ಣುವಾ ॥
ಸನನಾವಿಷ್ಣು ಶರೀರಶೂಲಧರನಾ ವಿಷ್ಣುಪ್ರಸಂ ಭಾಪು! ವಿ ।
ಷ್ಣುಶಿರೋವೇಷ್ಟನನೆಂತು ಸಂಸ್ತುತಿಯಿಪೆಂ ಪಂಪಾವಿರೂಪಾಕ್ಷನಂ ॥ ೯೭

ಕೇಳಲಿ ವೈಷ್ಣವಾ ನೆಗಟ್ಟಿ* ನಿನ್ನ ನೃಸಿಂಹನನೆಂತು ಕಾಣುತುಂ ।
ಕಾಳಗದಲ್ಲಿಯುಮ್ಕ್ರ ಶರಭಂ ನುತಿವೇನವನಗ್ಗಟಾ! ನಿರೋ ॥
ಧಾಳಿಯುನಿನ್ನವೊಂದಸುರೆ ಪೇೞ್ವೆನು ದಕ್ಷನ ಯಾಗದಲ್ಲಿ ಚಿ! ।
ಪೇಟಿದೇಕೆ ದೇವನಣುಗಂ ನಿನಗೊತ್ತಿದ ಭಂಗವೆಲ್ಲಮಂ ॥ ೯೮

ಸಡಿ ಘಡ ಮಾನವರ್ ಕುಡುವರೆಂಬುದನಾಂತಿದಿರೆನ್ನ ಮುಂದೆ ಕ ।
ಸ್ಪಡದ ಶರೀರಿಗಳ್ ತೃಣದ ಹಾಪೆಗಳಕ್ಕಟ! ಮಣ್ಣ ಬೊಂಬೆಗಳ್ ॥
ಕುಡುವುವೆ ಬೇಡು ಬೇಡಿದುದನೀವ ಮಹಾನಿಧಿಯುಂ ಮಹೇಶನಂ ।
ನೃಡನನನೂನದಾನಿಯನನಂಪಿನ ಪೆಂಪಿನ ಹಂಪೆಯಾಳ್ದನಂ ॥

ಎಱಗುವೆನೆನ್ನ ಹಂಪೆಯರಸಂಗೆ ಹರಂಗೆ ಶಿವಂಗೆ ಮಿಕ್ಕಿನ ।
ಗೆಱಗುವ್ರೆಡುಂಟೆ ಪಂಚಮುಖಮುಂಟೆ ಗಜಾಜಿನಮುಂಟೆ ಪತ್ತು ತೋಳ್ ॥
ಕಱೆಗೊರಲುಂಟೆ ಕೆಂಜಡೆಗಳುಂಟೆ ಮರುನ್ನದಿಯುಂಟೆ ಭಾಳದೊಳ್ ।
ಮಿಱುಗುವ ನೇತ್ರಮುಂಟೆ ಶಶಿಯುಂಟೆ ವೃಷಧ್ವಜಮುಂಟೆ ದೇವರೊಳ್ ॥

ಜಯಜಯ ಪುಣ್ಯಮಾರ್ಗಮಿದು ಸಾತ್ತ್ವಿಕಲಕ್ಷಣಮಿಂತಿದಾವ್ಯರ ।
ಸ್ವಯಮಿದನೂನಭಕ್ತಿರಸಪೂರಮಿದುತ್ತಮಶೀಲಭಕ್ತರಾ ॥
ಪ್ರಿಯಮಿದು ತಪ್ಪದೆಂದು ಶರಣರ್ ಮಿಗೆ ಬಣ್ಣಿಸೆ ಪೇೞ್ದನಾದ! ಹಂ ।
ಪೆಯ ಹರಿದೇವನೀಶತಕಮಂ ಸಕಲೇಷ್ಟಫಲಪ್ರದಾತೃವಂ ॥ ೧೦೦

ಹಂಪೆಯ ಹರಿದೇವನಿಂ

ವಿ ರ ಚಿ ತ ವಾ ದ

# ಪಂಪಾ ಶತಕಂ.

ಸಂಪೂರ್ಣಂ.

—o—

# KARNATAKA KAVYA-KALANIDHI

A monthly journal intended for the publication
of
**RARE and EXCELLENT KANNADA WORKS.**

Each number contains 40 pages and the paging is so arranged that on the completion of each work it may be bound as a separate volume. The Editors appeal to the sympathy of the Public. The work is costly but it will preserve literary treasures that otherwise are likely to be lost.

All who are interested in the ancient literature of their country should subscribe.

**Terms of Subscription.**

| | |
|---|---|
| Yearly Subscription | Rs. 3-0-0 |
| Single copy to subscribers only | 0-6-0 |

Postage Extra.

All subscriptions must be paid in advance.

Address—

The Editors, Karnataka Kavya Kalanidhi, Mysore.

**ಕರ್ಣಾಟಕ ಕಾವ್ಯಕಲಾನಿಧಿ.**

ಈ ಮಾಸ ಪುಸ್ತಕವು ಪ್ರತಿ ತಿಂಗಳೂ ಪ್ರಕಟವಾಗುತ್ತದೆ. ಇದರಲ್ಲಿ ಪ್ರಾಚೀನ ಕವಿಗಳ ಉತ್ತಮವಾದ ಕಾವ್ಯ ನಾಟಕ ಚಂಪು ಗದ್ಯ ಛಂದಸ್ಸು ಅಲಂಕಾರ ಮುಂತಾದ ಗ್ರಂಥಗಳು ಮುದ್ರಿಸಲ್ಪಡುತ್ತವೆ. ಇದರಲ್ಲಿ ಅಚ್ಚಾಗುವ ಗ್ರಂಥಗಳಿಗೆ ಬೇರೆಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಗ್ರಂಥವು ಮುಗಿದಕೂಡಲೆ ಬೇರೆಬೇರೆ ಪುಸ್ತಕಗಳಾಗಿ ರಟ್ಟುಕಟ್ಟಿಸಬಹುದು. ಇದರ ಪ್ರತಿಸಂಚಿಕೆಯೂ ೪೦ ಪುಟಗಳಿಗೆ ಕಡಮೆಯಿಲ್ಲದೆ ಇರುತ್ತದೆ.

ಭಾಷಾಭಿಮಾನಿಗಳೆಲ್ಲರೂ ಇದಕ್ಕೆ ಪ್ರೋತ್ಸಾಹ ಮಾಡುತ್ತಾರೆಂದು ನಂಬುತ್ತೇವೆ.

**ಚಂದಾನಿರ್ಣಯ.**

| | |
|---|---|
| ವರ್ಷವೊಂದಕ್ಕೆ ಹಾಸಲು ಇಲ್ಲದೆ | ೩—೦—೦ |
| ಚಂದಾದಾರರಿಗೆ ಮಾತ್ರ ಬಿಡಿಪ್ರತಿ ಒಂದಕ್ಕೆ | ೦—೬—೦ |

ಮುಂಗಡವಾಗಿ ಹಣವನ್ನು ಕಳುಹಿದ ಹೊರತು ಸಂಚಿಕೆಗಳು ಕಳುಹಲ್ಪಡುವದಿಲ್ಲ.